namma Bengaluru FOUNDATION

ನಮ್ಮ ಬೆಂಗಳೂರು ಪ್ರತಿಷ್ಠಾನ

Advocacy. Partnership. Activism for a better Bengaluru

O/C

28ನೇ ಸೆಪ್ಟಂಬರ್ 2016

**ಮಾನ್ಯ ಶ್ರೀ ಸಿದ್ದರಾಮಯ್ಯನವರೇ,**

**ವಿಷಯ:** ಬಿಬಿಎಂಪಿ ನಡೆಸುತ್ತಿರುವ ತೆರವು ಕಾರ್ಯಾಚರಣೆಯ ಸಂತ್ರಸ್ತರಿಗೆ ಪರಿಹಾರ ನೀಡುವ ಕುರಿತು,

**ಉಲ್ಲೇಖ : NBCC/01/2016-2017**

ಪ್ರಾಮಾಣಿಕವಾಗಿ, ಪರಿಶ್ರಮಪಟ್ಟು ಮನೆ ಕಟ್ಟಿಕೊಂಡಿದ್ದ ಬೆಂಗಳೂರಿನ ನೂರಾರು ಮನೆ ಮಾಲೀಕರ ಜೀವನದ ಮೇಲೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ನಡೆಸುತ್ತಿರುವ ಒತ್ತುವರಿ ತೆರವು ಕಾರ್ಯಾಚರಣೆಯು ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ದುರದೃಷ್ಟವಶಾತ್, ಮಿತಿಮೀರಿದ ಭ್ರಷ್ಟಾಚಾರ ಮತ್ತು ನಿರ್ಲಕ್ಷ್ಯಗಳಿಗೆ ಅವರೆಲ್ಲರೂ ಅಪಾರ ಬೆಲೆ ತೆರುತ್ತಿದ್ದಾರೆ. ಈ ನೆಲದ ಕಾನೂನುಗಳನ್ನು ಸರಾಸಗಟಾಗಿ ಉಲ್ಲಂಘಿಸಿದ ಬಿಲ್ಡರ್ ಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳುವುದನ್ನು ಬೆಂಗಳೂರು ನಗರ ಎದುರು ನೋಡುತ್ತಿದೆ. ಆದರೆ ಅದಕ್ಕಿಂತಲೂ ಪ್ರಮುಖವಾದ ವಿಷಯವೆಂದರೆ ಮನೆಕಳೆದುಕೊಂಡವರತ್ತ ಸರ್ಕಾರ ಈ ಕೂಡಲೇ ಗಮನ ಹರಿಸಬೇಕಾಗಿದೆ.

ಬಿಲ್ಡರ್ ಗಳನ್ನು ನಿಯಂತ್ರಿಸಿ ಕಾನೂನನ್ನು ಉಲ್ಲಂಘಿಸುವ ಅಕ್ರಮ ನಿರ್ಮಾಣಗಳ ಮೇಲೆ ಹದ್ದಿನ ಕಣ್ಣಿಡುವುದಲ್ಲದೆ ಅವುಗಳನ್ನು ಅಮಾಯಕ ನಾಗರಿಕರು ಖರೀದಿಸುವ ಮುನ್ನವೆ ತಡೆದು, ಬಿಲ್ಡರ್ ಗಳ ಮತ್ತು ಲೇಔಟ್ ನಿರ್ಮಾತೃಗಳ ಅಕ್ರಮಗಳಿಗೆ ಮುಗ್ಧರು ಬಲಿಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ.

ತನ್ನ ನಾಗರೀಕರನ್ನು ಸಂರಕ್ಷಿಸುವುದು ಚುನಾಯಿತ ಸರ್ಕಾರದ ಹೊಣೆಗಾರಿಕೆಯಾಗಿದೆ ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನ ನಂಬಿದೆ. ಅನೇಕ ನಾಗರಿಕರು ಬಿಬಿಎಂಪಿ ಅಂಗೀಕೃತ ನಕ್ಷೆಯನ್ನು ನಂಬಿ ತಮ್ಮ ಜೀವಮಾನದ ಉಳಿತಾಯವನ್ನೆಲ್ಲಾ ಈಗ ತೆರವುಗೊಳಿಸಲಾಗುತ್ತಿರುವ ಸ್ವತ್ತುಗಳ ಮೇಲೆ ತೊಡಗಿಸಿರುವುದರಿಂದ, ಸರ್ಕಾರದಿಂದ ಉತ್ತರದಾಯಿತ್ವ ಮತ್ತು ನ್ಯಾಯ ಬೇಡಿಕೆಯ ನಮ್ಮ ನಿರೀಕ್ಷೆ ಕಾನೂನು ಬದ್ಧವಾಗಿದೆ ಎಂದು ನಾವು ಭಾವಿಸುತ್ತಿದ್ದೇವೆ.

ತಮ್ಮದೇನೂ ತಪ್ಪಿಲ್ಲದಿದ್ದರೂ ಕೆಲವು ಬಿಲ್ಡರ್ ಗಳ ಮತ್ತು ರಿಯಲ್ ಎಸ್ಟೇಟ್ ಏಜೆಂಟರ ಮಿತಿಯಿಲ್ಲದ ದುರಾಸೆಗಳಿಗೆ ಬಲಿಯಾಗಿ, ಈಗ ನಡೆಯುತ್ತಿರುವ ತೆರವು ಕಾರ್ಯಾಚರಣೆಯಲ್ಲಿ ತಮ್ಮದೆಲ್ಲವನ್ನೂ ಕಳೆದುಕೊಳ್ಳುತ್ತಿರುವ ನಾಗರಿಕರ ಪಾಡು ಹೇಳತೀರದು.

ಅವರೆಲ್ಲರ ತೀವ್ರ ಸಂಕಷ್ಟದ ಇಂತಹ ಸಮಯದಲ್ಲಿ, ಎಲ್ಲಾ ಸಂತ್ರಸ್ತ ಕುಟುಂಬಗಳಿಗೆ ನೆರವಾಗುವ ರೀತಿಯಲ್ಲಿ ಸರ್ಕಾರ ಮಾರ್ಗೋಪಾಯಗಳನ್ನು ರಚಿಸಿ, ಮಾನವೀಯತೆಯ ಅಧಾರದ ಮೇಲೆ ಪರಿಹಾರ ನೀಡಬೇಕೆಂದು ನಾವು ಈ ಮೂಲಕ ಒತ್ತಾಯಿಸುತ್ತಿದ್ದೇವೆ. ತಪ್ಪಿತಸ್ಥ ಬಿಲ್ಡರ್ಸ್ ಗಳಿಂದ ದಂಡ ವಸೂಲಿ ಮಾಡಿ ಇದಕ್ಕೆ ಅಗತ್ಯ ಸಂಪನ್ಮೂಲವನ್ನು ಸರ್ಕಾರ ಹೊಂದಿಸಿಕೊಳ್ಳಬಹುದು.

ಹಾಗೆಯೇ, 2004ರಲ್ಲಿ ಫ್ರೆಂಡ್ಸ್ ಕಾಲೋನಿ ಡೆವಲಪ್ಮೆಂಟ್ ಕಮಿಟಿ ವರ್ಸಸ್ ಸ್ಟೇಟ್ ಆಫ್ ಒಡಿಸ್ಸಾ & ಒರ್ಸ್., (2004) 8 SCC 733 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ಕೆಲವು ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಕೂಡ ತಾವು ಗಮನಿಸಬೇಕು. ಮುಗ್ಧ ಖರೀದಿದಾರರ ನಂಬಿಕೆಗೆ

NA Chambers, # 3J, 7th "C" Main, 3rd Cross, Kormangala, 3rd Block, Bangalore - 560034. **Phone:** (080) 41102457 **Fax:** 25501130
**www.namma-bengaluru.org**

ದ್ರೋಹವೆಸಗಿರುವುದಲ್ಲದೆ, ಕೆಲ ಸಮಯದಲ್ಲಿ ಜನರನ್ನು ಉದ್ದೇಶ ಪೂರ್ವಕವಾಗಿ ವಂಚಿಸಿದ ಭ್ರಷ್ಟ ಬಿಲ್ಡರ್ ಗಳ ಮೇಲೆ ಭಾರಿ ದಂಡ ವಿಧಿಸಿ ಆಮೂಲಕ ಒಂದು ಕಲ್ಯಾಣ ನಿಧಿಯನ್ನು ಸ್ಥಾಪಿಸಲು ಅಲ್ಲಿನ ರಾಜ್ಯಕ್ಕೆ ಆಗ್ರಹಿಸಲಾಗಿದೆ, ಎಂದು ಅದರಲ್ಲಿ ಮಾನ್ಯ ನ್ಯಾಯಾಲಯವು ಹೇಳಿದೆ.

ನಮ್ಮ ನಗರ ಮತ್ತು ನಾಗರಿಕರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಈ ವಿಷಯವನ್ನು ಪ್ರಮುಖ ಆದ್ಯತೆಯ ಮೇರೆಗೆ ಪರಿಗಣಿಸಬೇಕೆಂದು ತಮ್ಮನ್ನು ಕೋರುತ್ತಿದ್ದೇವೆ ಮತ್ತು ಆಮೂಲಕ ಈ ಮಾನವೀಯ ಬಿಕ್ಕಟ್ಟನ್ನು ಪರಿಹರಿಸಲು ತುರ್ತಾಗಿ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇವೆ. ಈ ಕುರಿತು ತಮ್ಮ ಕಡೆಯಿಂದ ಸಕಾಲಿಕ ಮತ್ತು ಪರಿಣಾಮಕಾರಿ ತೀರ್ಮಾನವನ್ನು ನಾವು ಎದುರು ನೋಡುತ್ತಿದ್ದೇವೆ.

ಇದೇ ನಿರೀಕ್ಷೆಯಲ್ಲಿ ಮತ್ತು ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿಗಳು

**ಶ್ರೀಧರ್ ಪಬ್ಬಿಸೆಟ್ಟಿ**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ನಮ್ಮ ಬೆಂಗಳೂರು ಪ್ರತಿಷ್ಠಾನ

**ಬಿ ಎನ್ ವಿಜಯಕುಮಾರ್,**
ಶಾಸಕರು, ಜಯನಗರ ವಿಧಾನಸಭಾ ಕ್ಷೇತ್ರ

**ವಿ. ಬಾಲಸುಬ್ರಹ್ಮಣಿಯನ್,**
ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

**ಪೃಥ್ವಿ ರೆಡ್ಡಿ**
ಕನ್ವೀನರ್, ಆಮ್ ಆದ್ಮಿ ಪಾರ್ಟಿ

ಗೆ,
**ಶ್ರೀ ಸಿದ್ದರಾಮಯ್ಯನವರು,**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

28.9.16

<u>ಪ್ರತಿಯನ್ನು:-</u>
**ಶ್ರೀ ಅರವಿಂದ್ ಜಾಧವ್,** ಭಾ.ಆ.ಸೇ, ಮಾನ್ಯ ಮುಖ್ಯಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು

Office of the Chief Secretary
Government of Karnataka
Vidhana Soudha